**ಸಾಕ್ಷಿಯನ್ನು ದಿಃ 07.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1.ಬಸವೇಶ್ವರ ರಸ್ತೆಯಲ್ಲಿರುವ ಮನೆ ಹಾಗೂ ಕಡಕೋಳದಲ್ಲಿರುವ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎರಡೂ ನನ್ನ ತಂದೆಯದ್ದು ಎನ್ನುತ್ತಾರೆ. ವಿದ್ಯಾರಣ್ಯಪುರದಲ್ಲಿರುವ ಮನೆಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಅದನ್ನು ಮೊದಲ ಹೆಂಡತಿಯ ಮಗ ಲಕ್ಷ್ಮೀಪತಿ ರಾಜು ರವರಿಗೆ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ವಿಭಾಗ ಮಾಡಿ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಕಡಕೋಳದಲ್ಲಿರುವ ಜಮೀನು ಈಗಲೂ ನನ್ನ ಹೆಸರಿನಲ್ಲಿ ಇದೆ. ಕಡಕೋಳದಲ್ಲಿರುವ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ವಿಭಾಗದಲ್ಲಿ ತೋರಿಸಿದ್ದೇವೆ ಎನ್ನುತ್ತಾರೆ.

2. ಈಗ ನನಗೆ ತೋರಿಸುತ್ತಿರುವ ಹಕ್ಕು ಖುಲಾಸೆ ಪತ್ರ ನನ್ನ ಅಣ್ಣ ನನಗೆ ಬರೆದುಕೊಟ್ಟಿದ್ದು ಎಂದರೆ ಸರಿ.ಸಾಕ್ಷಿ ನೋಡಿ ಗುರುತಿಸಿದ ದಿನಾಂಕ 07.12.2021 ರ ಹಕ್ಕು ಖುಲಾಸೆ ಪತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು.ದಾವಸ್ತೆಯಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಅದು ಮೊದಲ ಹೆಂಡತಿ ಹಾಗೂ ಅವರ ಮಕ್ಕಳಿಗೆ ಮಾತ್ರ ಹಕ್ಕಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಣ್ಣನಿಗೆ ಮದುವೆಯಾಗದ ಕಾರಣ ಹಕ್ಕಿದೆ ಎನ್ನುತ್ತಾರೆ. ಅವರು ಮೊದಲೆ ಹೆಂಡತಿಯ ಮಗ ಎಂದರೆ ಸರಿ. ನಾನು ಎರಡನೇ ಹೆಂಡತಿಯ ಮಗ ಎಂದರೆ ಸರಿ. ಬಸವೇಶ್ವರ ರಸ್ತೆಯಲ್ಲಿರುವ ಮನೆ ಮತ್ತು ಕಡಕೋಳದಲ್ಲಿರುವ ಜಮೀನಿನಲ್ಲಿ ಎಲ್ಲಾ ಪ್ರತಿವಾದಿಯರಿಗೆ ಹಕ್ಕಿದೆ ಎಂದರೆ ಸರಿಯಲ್ಲ. ಹಕ್ಕು ಖುಲಾಸೆ ಪತ್ರದಲ್ಲಿರುವ ಜಮೀನುಗಳನ್ನು ನಾವು ಪಿತ್ರಾರ್ಜಿತ ಸ್ವತ್ತು ಎಂದು ಕಾಣಿಸಿದ್ದೇವೆ ಎಂದರೆ ಸರಿ.

**ಪಾಟೀ ಸವಾಲುಃ1 ರಿಂದ 5 ಹಾಗೂ 15 ಮತ್ತು 17 ನೇ ಪ್ರತಿವಾದಿ ಪರ ವಕೀಲರಿಂದಃ**

1 ರಿಂದ 5 ಹಾಗೂ 15 ಮತ್ತು 17 ನೇ ಪ್ರತಿವಾದಿಯರು ಹಾಗೂ ವಕೀಲರು ಗೈರುಹಾಜರಿದ್ದು ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.